**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 2**

**ಚಾಸಾ ಃ 2**

ಸಾಕ್ಷಿಯ ಹೆಸರು ಃ ಕಲ್ಯಾಣಿ

ಗಂಡನ ಹೆಸರುಃ ರಾಮ

ವಯಸ್ಸು ಃ 45 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಐಯ್ಯನಕೇರೆ

ದಿಃ 11.04.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 1 ನನ್ನ ಪತಿ. ಚಾಸಾ 3 ನನ್ನ ಭಾವ. ಚಾಸಾ 4 ನನ್ನ ಮಗಳು. ಮೃತ ಲಕ್ಷ್ಮಿ ನನ್ನ ಮಗಳು. ನನಗೆ 8 ಜನ ಮಕ್ಕಳು. ಮೃತ ಲಕ್ಷ್ಮಿ 3 ನೇ ಮಗಳು. ನಾನು, ನನ್ನ ಗಂಡ ಹಾಗೂ ಮಕ್ಕಳೊಂದಿಗೆ ಅಯ್ಯನಕೇರೆ ಗ್ರಾಮದಲ್ಲಿ ವಾಸವಾಗಿದ್ದೇನೆ. ಲಕ್ಷ್ಮಿಯನ್ನು 3-4 ವರ್ಷಗಳಿಂದ ಬಾಳೆಲೆ ಕಡೆಗೆ ಕೂಲಿ ಕೆಲಸಕ್ಕೆ ಆರೋಪಿಯು ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಆರೋಪಿಯು ಲಕ್ಷ್ಮಿಯೊಂದಿಗೆ ಬೇರೆ ಆಳುಗಳನ್ನು ಕೂಡ ಜೀಪಿನಲ್ಲಿ ಬಾಳೆಲೆ ಕಡೆಗೆ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು.

2. ನಾನು ಹಾಗೂ ನನ್ನ ಗಂಡ ತೋರ ಗ್ರಾಮದಲ್ಲಿ ಇದ್ದಾಗ ಚಾಸಾ 3 ರವರು ದಿಃ 03.02.2020 ರಂದು ಸಂಜೆ 4 ಗಂಟೆಯ ಸಮಯಕ್ಕೆ ನಮಗೆ



ಫೋನ್ ಮಾಡಿ ನಿಮ್ಮ ಮಗಳು ಲಕ್ಷ್ಮಿಗೆ ಆರೋಪಿ ವಿಷ ಕುಡಿಸಿದ್ದಾರೆ, ಆಕೆಯನ್ನು ಹನಗೋಡು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು. ನಾನು ಹಾಗೂ ಚಾಸಾ 1 ರವರು 05.02.2020 ರಂದು ಹನಗೋಡು ಆಸ್ಪತ್ರೆಗೆ ಹೋದೆವು. ನಾವು ಲಕ್ಷ್ಮಿಯನ್ನು ವಿಚಾರಿಸಿದಾಗ ಆಕೆ ತನಗೆ ಆರೋಪಿ ವಿಷ ಕುಡಿಸಿದ್ದಾರೆ, 4 ವರ್ಷಗಳಿಂದ ನಾನು ಹಾಗೂ ಆರೋಪಿ ಪ್ರೀತಿಸುತ್ತಿದ್ದು, ಈಗ ಆರೋಪಿ ಬೇರೆ ಹುಡುಗಿಯೊಂದಿಗೆ ಸುತ್ತಾಡುತ್ತಿದ್ದು ಈ ಬಗ್ಗೆ ನಾನು

ಆರೋಪಿಯನ್ನು ಕೇಳಿದಾಗ ಆತ ನೀನು ಜೇನುಕುರುಬರ ಜಾತಿಯವಳು, ನನಗೆ ನೀನು ಬೇಡ, ನಾನು ಬೇರೆ ಹುಡುಗಿಯನ್ನು ಮದುವೆಯಾಗುತ್ತೇನೆ ನೀನು ಇರುವುದು ಬೇಡ ಎಂದು ಹೇಳಿ ನನಗೆ ವಿಷ ಕುಡಿಸಿದ ಎಂದು ಹೇಳಿದಳು.

3. ಆರೋಪಿ ಹಾಗೂ ಮೃತ ಲಕ್ಷ್ಮಿಯವರಿಗೆ ಆರೋಪಿ ಬೇರೆ ಹುಡುಗಿಯೊಂದಿಗೆ ಸುತ್ತಾಡುತ್ತಿದ್ದ ಬಗ್ಗೆ ಜಗಳ ಆಗಿ ಲಕ್ಷ್ಮಿ 3 ದಿನ ಕೆಲಸಕ್ಕೆ ಹೋಗಿರಲಿಲ್ಲ. 4 ದಿನ ಬಿಟ್ಟು ಬೇರೆ ಆಳುಗಳನ್ನು ಬಾಳೆಲೆ ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಲಕ್ಷ್ಮಿಯನ್ನು ಲಕ್ಷ್ಮಿಯನ್ನು ಜೀಪಿನಲ್ಲಿ ಬಾಳೆಲೆ ಗ್ರಾಮಕ್ಕೆ ಕೆಲಸಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆಗ ಆರೋಪಿಯು ಲಕ್ಷ್ಮಿ ಜೊತೆ ಜಗಳ ಮಾಡಿ ನೀನು ಇದ್ದರೆ ನನಗೆ ಬೇರೆ ಹುಡುಗಿಯನ್ನು ಮದುವೆಯಾಗಲು ತೊಂದರೆಯಾಗುತ್ತದೆ ಎಂದು ಹೇಳಿ ವಿಷ ಕುಡಿಸಿರುತ್ತಾರೆ. ಹನಗೋಡು ಆಸ್ಪತ್ರೆಯಿಂದ ಲಕ್ಷ್ಮಿಯನ್ನು ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇವೆ. ಆಕೆ ದಿಃ



10.02.2020 ರಂದು ಮೃತಪಟ್ಟಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಈಗ ತೋರಿಸಿದ ಛಾಯಾಚಿತ್ರದಲ್ಲಿ ಲಕ್ಷ್ಮಿಯ ಮೃತ ದೇಹ ಕಾಣಿಸುತ್ತಿದೆ. ಸದರಿ ಛಾಯಾಚಿತ್ರವನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ. ಆರೋಪಿಯು ಕುರುಬ ಜನಾಂಗದ ಮೇಲ್ಜಾತಿಯವರು. ನಾವು ಜೇನುಕುರುಬರ ಜಾತಿಯವರು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

4. ದಿಃ 03.02.2020 ರಂದು ಚಾಸಾ 3 ರವರು ನಮಗೆ ಫೋನ್ ಮಾಡಿದಾಗ ನಾನು ಹಾಗೂ ಚಾಸಾ 1 ತೋಟದಲ್ಲಿ ಕೆಲಸ ಮಾಡುತ್ತಿದ್ದೆವು. ತೋಟದ ಕೆಲಸದ ಸಮಯ ಬೆಃ 7.30 ರಿಂದ ಸಂಜೆ 4.30 ರವರೆಗೆ ಇರುತ್ತದೆ ಎಂದರೆ ಸರಿ. ಚಾಸಾ 3 ರವರು ಚಾಸಾ 1 ರವರಿಗೆ ಫೋನ್ ಮಾಡಿದ ನಂತರ ಚಾಸಾ 1 ರವರು ನನಗೆ ವಿಷಯ ತಿಳಿಸಿದರು. ಚಾಸಾ 1 ರವರು ಲಕ್ಷ್ಮಿ ವಿಷ ಕುಡಿದಿದ್ದಾಳೆ ಎಂದು ತಿಳಿಸಿದರು ಎಂದರೆ ಸರಿ. ತೀರ ಹಣದ ಅವಶ್ಯಕತೆ ಇದ್ದರೆ ತೋಟದ ಯಜಮಾನರು ಕೇಳಿದರೆ ಕೂಡಲೇ ಹಣ ಕೊಡುತ್ತಿದ್ದರು ಎಂದರೆ ಸರಿ. ದಿಃ 03.02.2020 ರಂದು ಸಾಹುಕಾರರು ಇರಲಿಲ್ಲ, ಆದ ಕಾರಣ 5 ನೇ ತಾರೀಖಿಗೆ

ನಾವು ಹನಗೋಡಿಗೆ ಹೋಗಿದ್ದೆವು. ಕಾಫಿ ಕುಯ್ಯುವ ಕೆಲಸದ ಸಮಯದಲ್ಲಿ ಕೆಲಸ ಮುಗಿದ ನಂತರ ಗಂಡಾಳುಗಳಿಗೆ ಕಾಫಿ ತೋಟದ ಯಜಮಾನರು ಮದ್ಯ ಕೊಡುತ್ತಾರೆ ಎಂದರೆ ಸರಿ. ತೋಟದ ಯಜಮಾನರು ಇಲ್ಲದೇ



ಇದ್ದರೆ ಅವಶ್ಯಕತೆ ಇದ್ದರೆ ಹಣವನ್ನು ತೋಟದ ಮಾಲೀಕರ ಪತ್ನಿ ಕೊಡುತ್ತಿದ್ದರು ಎಂದರೆ ಸರಿ. ದಿಃ 03.02.2020 ರಂದು ಚಾಸಾ 3 ರವರು ಚಾಸಾ 1 ರವರಿಗೆ ಫೋನ್ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ತೋಟದ ಮಾಲೀಕರು ಅಲ್ಲೇ ಇದ್ದರೂ ಕೂಡ ಅವರ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಬಳಿ ಮೊಬೈಲ್ ಫೋನ್ ಇತ್ತು. ನನ್ನ ಗಂಡನ ಬಳಿ ಸಾಹುಕಾರರ ಮೊಬೈಲ್ ನಂಬರ್ ಇತ್ತು.

5. ದಿಃ 05.02.2020 ರಂದು ನಾವು ಹನಗೋಡು ಆಸ್ಪತ್ರೆಗೆ ಹೋದಾಗ ಅಲ್ಲಿ ಪೊಲೀಸರು ಇರಲಿಲ್ಲ ನಾವು ಹೋದ ನಂತರ ಪೊಲೀಸರು ಬಂದರು. ಪೊಲೀಸರು ಬಂದು ವಿಚಾರಣೆ ಮಾಡಿದ್ದರು. ನಾವು ಲಕ್ಷ್ಮಿಯನ್ನು ಮಾರನೇ ದಿನ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದಿಃ 05.02.2020 ರಂದು ಲಕ್ಷ್ಮಿಯವರು ಮಾತನಾಡುವ ಪರಿಸ್ಥಿತಿಯಲ್ಲಿ ಇರದೇ ಇದ್ದ ಕಾರಣ ವೈದರು ಆಕೆಯನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದ್ದರು ಎಂದರೆ ಸರಿಯಲ್ಲ. ದಿಃ 05.02.2020 ರಂದು ನಾನು ಹಾಗೂ ನನ್ನ ಗಂಡ ಜೊತೆಯಾಗಿ ಹನಗೋಡು ಆಸ್ಪತ್ರೆಗೆ ಹೋಗಿದ್ದೆವು. ನಾವು ಹನಗೋಡು ಆಸ್ಪತ್ರೆಗೆ ದಿಃ 05.02.2020 ರಂದು ಹೋಗಿಲ್ಲ ಹಾಗೂ ಲಕ್ಷ್ಮಿಯವರು ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಮತ್ತು ಆಕೆ ನಮಗೆ ಏನೂ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಲಕ್ಷ್ಮಿ ಹಾಗೂ ಚಾಸಾ 4



ಇಬ್ಬರೂ ಕೂಲಿ ಕೆಲಸ ಮಾಡುತ್ತಿದ್ದರು. ಸಾಮಾನ್ಯವಾಗಿ ಕೂಲಿ ಕೆಲಸ ಮಾಡುವವರು ಬೆಃ 8 ಗಂಟೆಗೆ ಮನೆಯಿಂದ ಹೋಗುತ್ತಾರೆ ಎಂದರೆ ಸರಿ. ಚಾಸಾ 4 ರವರು ಆ ದಿನ ಕೂಲಿ ಕೆಲಸಕ್ಕೆ ಹೋಗಿರಲಿಲ್ಲ, ನೆಂಟರ ಮನೆಗೆ ಹೋಗಿದ್ದರು. ದಿಃ 03.02.2020 ರಂದು ಚಾಸಾ 4 ರವರು ನಾಗಪುರದಲ್ಲಿರುವ ನೆಂಟರ ಮನೆಗೆ ಹೋಗಿದ್ದರು.

6. ದಿಃ 06.02.2020 ರಂದು ನನ್ನ ಮಗಳು ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ. ದಿಃ 06.02.2020 ರಿಂದ 10.02.2020 ರವರೆಗೆ ಲಕ್ಷ್ಮಿ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಒಂದೊಂದು ಮಾತನಾಡುತ್ತಿದ್ದರು. ದಿಃ 06.02.2020 ರಿಂದ 10.02.2020 ರವರೆಗೆ ಆಕೆ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ, ನೀರು ಮಾತ್ರ ಕೇಳುತ್ತಿದ್ದಳೇ ಎನ್ನುವ ಪ್ರಶ್ನೆಗೆ ಸಾಕ್ಷಿ ನುಡಿಯುತ್ತಾರೆ ಒಮ್ಮೆ ನೀರು ಕೇಳಿದ್ದಳು. ದಿಃ 05.02.2020 ರಿಂದ 10.02.2020 ರವರೆಗೆ ಲಕ್ಷ್ಮಿ ನನ್ನೊಂದಿಗಾಗಲೀ ಅಥವಾ ಚಾಸಾ 1 ರವರ ಜೊತೆಯಾಗಲೀ ಮಾತನಾಡಿಯೇ ಇಲ್ಲ ಎಂದರೆ ಸರಿಯಲ್ಲ.

7. ಹನಗೋಡು ಆಸ್ಪತ್ರೆಯಲ್ಲಿ ಪೊಲೀಸರು ಚಾಸಾ 1 ರವರನ್ನು ವಿಚಾರಣೆ ಮಾಡಿದ್ದರು. ನನಗೆ ಏನು ವಿಚಾರಣೆ ಮಾಡಿದ್ದರು ಎಂದು ಗೊತ್ತಿಲ್ಲ. ಪೊಲೀಸರು ಲಕ್ಷ್ಮಿ ವಿಷ ಕುಡಿದಿದ್ದರು ಎಂದು ಬಂದಿದ್ದರು. ಆರೋಪಿ ನನ್ನ ಮಗಳು ಲಕ್ಷ್ಮಿಯನ್ನು ಬಾಳೆಲೆ ಗ್ರಾಮಕ್ಕೆ ಜೀಪಿನಲ್ಲಿ



ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಬಾಳೆಲೆ ಗ್ರಾಮ ಸುಮಾರು 40 ಕಿಮಿ ದೂರ ಇದೆ ಎಂದರೆ ಸರಿ. ಹನಗೋಡಿನಿಂದ ಬಾಳೆಲೆ ಹೋಗಿ ಬರಬೇಕಾದರೆ ಎಷ್ಟು ಸಮಯ ಬೇಕಾಗುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಲಕ್ಷ್ಮಿ ಆರೋಪಿಯನ್ನು ಪ್ರೀತಿಸುತ್ತಿದ್ದಳು ಎಂದು ಚಾಸಾ 4 ನನಗೆ ಹೇಳಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಲಕ್ಷ್ಮಿ ನನಗೆ ಹೇಳಿದ್ದರು. ದಿಃ 05.02.2020 ಕ್ಕಿಂತ ಮೊದಲೇ ಲಕ್ಷ್ಮಿ ಆರೋಪಿಯನ್ನು ಪ್ರೀತಿಸುತ್ತಿದ್ದಳು ಎಂದು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ.

8. ನಾವು ತೋಟದ ಕೆಲಸ ಮುಗಿಸಿಕೊಂಡು ಲೈನ್ ಮನೆಗೆ ಹೋಗುತ್ತೇವೆ. ತೋಟ ಬೇರೆ ಕಡೆ ಹಾಗೂ ಲೈನ್ ಮನೆ ಬೇರೆ ಕಡೆ ಇದೆ. ಚಾಸಾ 4 ರವರ ಬಳಿ ಮೊಬೈಲ್ ಫೋನ್ ಇದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ನನ್ನ ಮಗಳು ಲಕ್ಷ್ಮಿಯನ್ನು ಬಾಳೆಲೆ ಗ್ರಾಮಕ್ಕೆ ಕೂಲಿ

ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ದಿಃ **05.02.2020** ರಂದು ನಾವು ಹನಗೋಡು ಆಸ್ಪತ್ರೆಗೆ ಹೋಗಿಲ್ಲ ಹಾಗೂ ನಮ್ಮ ಮಗಳು ಲಕ್ಷ್ಮಿ ನಮಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ಆರೋಪಿಯನ್ನು ಪ್ರೀತಿಸುತ್ತಿರುವ ವಿಷಯ ಹಾಗೂ ಆರೋಪಿ ಬೇರೆ ಹುಡುಗಿಯ ಜೊತೆ ಸುತ್ತಾಡುತ್ತಿರುವ ವಿಷಯ ನನಗೆ ಹೇಳಿಲ್ಲ ಎಂದರೆ



ಸರಿಯಲ್ಲ. ಆರೋಪಿ ನನ್ನ ಮಗಳು ಲಕ್ಷ್ಮಿಯ ಬಳಿ ನಿನ್ನನ್ನು ನಾನು ಪ್ರೀತಿಸುತ್ತಿಲ್ಲ, ನೀನು ಕುರುಬ ಜಾತಿಯವಳು ಎಂದು ಹೇಳಿದ್ದಾನೆ ಎಂದು ಲಕ್ಷ್ಮಿ ನನಗೆ ಹೇಳಿದ್ದಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಿ ಆಕೆಗೆ ಆರೋಪಿ ವಿಷ ಕುಡಿಸಿದ್ದಾರೆ ಎಂದು ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ದಿಃ **03.02.2020** ರಂದು ಆರೋಪಿ ನಮ್ಮ ಮನೆಯ ಬಳಿ ಬಂದು ಲಕ್ಷ್ಮಿಯನ್ನು ಬಾಳೆಲೆ ಗ್ರಾಮಕ್ಕೆ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಬೇರೆ ಯಾವುದೋ ಕಾರಣಕ್ಕೆ ಮೈಸೂರಿನಲ್ಲಿ ವಿಷ ಸೇವಿಸಿದ್ದಳು ಎಂದರೆ ಸರಿಯಲ್ಲ. ಆರೋಪಿ ಪಕ್ಕದ ಊರಿನವರಾಗಿದ್ದು ಆತ ಮೇಸ್ತ್ರಿ ಕೆಲಸ ಮಾಡುತ್ತಿದ್ದು ಆತ ಹಣವಂತನಾದ ಕಾರಣ ಹಣವನ್ನು ಕಬಳಿಸುವ ಉದ್ದೇಶದಿಂದ ಜೇನುಕುರುಬರ ಸಂಘದವರೊಂದಿಗೆ ಸೇರಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ದೂರು ನೀಡಿರುವ ಬಗ್ಗೆ ಗೊತ್ತು. ದೂರು ಕೊಡುವುದಕ್ಕಿಂತ ಮುಂಚೆ ಆರೋಪಿಯೊಂದಿಗೆ ನಾವು ರಾಜಿ ತೀರ್ಮಾನ ಮಾಡಲು ಪ್ರಯತ್ನಿಸಿದ್ದೆವು ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ವಸೂಲಿ ಮಾಡಲು ನಾನು, ಚಾಸಾ **1**, ಚಾಸಾ **3** ಹಾಗೂ ಕಾಂತರಾಜು ಎನ್ನುವವರು ಪ್ರಯತ್ನ ಮಾಡಿದ್ದೆವು, ಆ ವಿಷಯ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ



ಹಣ ವಸೂಲಿ ಮಾಡಲು ಪ್ರಯತ್ನಪಟ್ಟಿದ್ದು ಆತ ಹಣ ಕೊಡದೇ ಇದ್ದ ಕಾರಣ ಆತನ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 3**

**ಚಾಸಾ ಃ 3**

ಸಾಕ್ಷಿಯ ಹೆಸರು ಃ ಸಿ ಪೊಣ್ಣಪ್ಪ

ತಂದೆಯ ಹೆಸರುಃ ಪುಟ್ಟಯ್ಯ

ವಯಸ್ಸು ಃ 52 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಅಯ್ಯನಕೆರೆ ಹಳ್ಳಿ

ದಿಃ 11.04.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 1 ನನ್ನ ತಮ್ಮ. ಚಾಸಾ 2 ನನ್ನ ತಮ್ಮನ ಹೆಂಡತಿ, ಚಾಸಾ 4

ಚಾಸಾ 1 ರವರ ಮಗಳು. ನಾನು ಅಯ್ಯನಕೆರೆಯಲ್ಲಿ ವಾಸವಾಗಿದ್ದೇನೆ. ಚಾಸಾ 1 ರಿಂದ 4 ರವರು ಅಯ್ಯನಕೆರೆಯಲ್ಲಿ ವಾಸವಾಗಿದ್ದಾರೆ. ಮೃತ ಲಕ್ಷ್ಮಿ ಹಾಗೂ ಚಾಸಾ 4 ಚಾಸಾ 1 ಮತ್ತು 2 ರವರ ಮಕ್ಕಳು. ಮೃತ ಲಕ್ಷ್ಮಿಯನ್ನು ಆರೋಪಿ ಜೀಪಿನಲ್ಲಿ 5-6 ವರ್ಷಗಳಿಂದ ತೋಟದ ಕೆಲಸಕ್ಕೆ ಬಾಳೆಲೆ ಮತ್ತು ವಿರಾಜಪೇಟೆ ಕಡೆಗೆ ಕರೆದುಕೊಂಡು ಹೋಗುತ್ತಿದ್ದರು.

2. ದಿಃ 03.02.2020 ರಂದು ನಾನು ಚಟ್ಟಳ್ಳಿಗೆ ಕೆಲಸಕ್ಕೆ ಹೋಗಿದ್ದು ಮದ್ಯಾಹ್ನ ಸುಮಾರು 3.30 ಗಂಟೆಗೆ ಹನಗೋಡು ಆಸ್ಪತ್ರೆಯಿಂದ ನನಗೆ ಫೋನ್ ಬಂದಿದ್ದು ಚಾಸಾ 1 ರವರ ಮಗಳಿಗೆ ಯಾರೋ ವಿಷ ಕುಡಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಹೇಳಿದರು. ನಾನು ಸಂಜೆ 5 ಗಂಟೆಗೆ



ಹನಗೋಡು ಸರ್ಕಾರಿ ಆಸ್ಪತ್ರೆಗೆ ಹೋದೆ. ಆಗ ವೈದ್ಯರು ಲಕ್ಷ್ಮಿಗೆ ಚಿಕಿತ್ಸೆ ನೀಡುತ್ತಿದ್ದರು. ನಾನು ವಿಚಾರಿಸಿದಾಗ ಆಕೆ ತಾನು ಆರೋಪಿ ಪ್ರದೀಪನನ್ನು ಪ್ರೀತಿಸುತ್ತಿದ್ದುದಾಗಿಯೂ, ನೀನು ಜೇನುಕುರುಬರ ಹುಡುಗಿ, ನಾನು ನಿನ್ನನ್ನು ಮದುವೆಯಾಗುವುದಿಲ್ಲ, ಬೇರೆಯವರನ್ನು ಮದುವೆಯಾಗುತ್ತೇನೆ ಎಂದು ಹೇಳಿದ ಕಾರಣ ಜಗಳ ಆಗಿದ್ದು ಆ ಕಾರಣದಿಂದ 3 ದಿನ ಮನೆಯಲ್ಲಿಯೇ ಇದ್ದೆ ಎಂದು ಹೇಳಿದಳು. ದಿಃ 03.02.2020 ರಂದು ಬೆಳಿಗ್ಗೆ 8 ಗಂಟೆಗೆ ಕೆಲಸದ ಆಳುಗಳನ್ನು ಕರೆದುಕೊಂಡು ಹೋಗಿ ನಂತರ ವಾಪಸ್ಸು ಲಕ್ಷ್ಮಿಯವರ ಮನೆಗೆ ಬಂದು ಲಕ್ಷ್ಮಿಯನ್ನು ಜೀಪಿನಲ್ಲಿ ಬಾಳೆಲೆಗೆ ಕರೆದುಕೊಂಡು ಹೋಗಿ ನೀನು ಜೇನುಕುರುಬರ ಹುಡುಗಿ, ನಿನ್ನನ್ನು ನಾನು ಮದುವೆಯಾಗುವುದಿಲ್ಲ, ಬೇರೆಯವರನ್ನು ಮದುವೆಯಾಗುತ್ತೇನೆ ಎಂದು ಹೇಳಿ ಆಕೆಯ ಕೈ-ಕಾಲುಗಳನ್ನು ಬಿಗಿಯಾಗಿ ಹಿಡಿದು ಆಕೆಗೆ ವಿಷ ಕುಡಿಸಿದ್ದಾನೆ ಹಾಗೂ ತನ್ನನ್ನು ಆತನೇ ಆಸ್ಪತ್ರೆಗೆ ತಂದು ಸೇರಿಸಿರುತ್ತಾನೆ ಎಂದು ಲಕ್ಷ್ಮಿ ಹೇಳಿರುತ್ತಾಳೆ. ನಾನು ಈ ವಿಷಯವನ್ನು ಚಾಸಾ 1 ರವರಿಗೆ ಫೋನ್ ಮಾಡಿ ಹೇಳಿದೆ. ದಿಃ 05.02.2020 ರಂದು ಚಾಸಾ 1 ಹಾಗೂ 2 ರವರು ಹನಗೋಡು ಸರ್ಕಾರಿ ಆಸ್ಪತ್ರೆಗೆ ಬಂದಿದ್ದರು. ಆಗ ಚಾಸಾ 1 ಹಾಗೂ 2 ರವರು ಲಕ್ಷ್ಮಿಯನ್ನು ವಿಚಾರಿಸಿದ್ದು ಆಕೆ ಆರೋಪಿ ಪ್ರದೀಪ ತನಗೆ ವಿಷ ಕುಡಿಸಿದ ಬಗ್ಗೆ ಹೇಳಿದ್ದಳು.

3. ವೈದ್ಯರು ಲಕ್ಷ್ಮಿಗೆ ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು



ಹೋಗುವಂತೆ ಹೇಳಿದ ಕಾರಣ ದಿಃ 05.02.2020 ರಂದು ಮದ್ಯಾಹ್ನ ಸುಮಾರು 12 ಗಂಟೆಯ ಸಮಯಕ್ಕೆ ಲಕ್ಷ್ಮಿಯನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದಿಃ 07.02.2020 ರಂದು ಚಾಸಾ 1 ರವರು ಪೊನ್ನಂಪೇಟೆ ಪೊ.ಠಾಣೆಗೆ ಬಂದು ಆರೋಪಿಯ ವಿರುದ್ದ ದೂರು ನೀಡಿರುತ್ತಾರೆ. ನಂತರ ದಿಃ 10.02.2020 ರಂದು ಲಕ್ಷ್ಮಿ ಮೃತಪಟ್ಟಿರುತ್ತಾರೆ. ಲಕ್ಷ್ಮಿ ಈ ಭೂಮಿಯಲ್ಲೇ ಇರಬಾರದು ಎಂದು ಹೇಳಿ ಆಕೆಗೆ ಆರೋಪಿ ಕಳೆನಾಷಕ ಔಷಧಿ ಕುಡಿಸಿದ್ದಾನೆ ಎಂದು ಲಕ್ಷ್ಮಿ ನಮಗೆ ಹೇಳಿರುತ್ತಾಳೆ. ಆರೋಪಿ ಕುರುಬ ಗೌಡ ಮೇಲ್ಜಾತಿಗೆ ಸೇರಿದವನಾಗಿರುತ್ತಾನೆ. ನಾವು ಜೇನುಕುರುಬರ ಜಾತಿಯವರಾಗಿರುತ್ತೇವೆ. ನಾನು ಆರೋಪಿಯ ವಿರುದ್ದ ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ಲಕ್ಷ್ಮಿಯವರ ಮೃತ ದೇಹದ ಛಾಯಾಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

4. ಅಯ್ಯನಕೆರೆ ಹಾಡಿ ನೇರಳೆಗುಪ್ಪೆ ಪಂಚಾಯತಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ನೇರಳೆಗುಪ್ಪೆ ಪಂಚಾಯತಿಯ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ. ನನಗೆ ಕಾಂತರಾಜು ಎನ್ನುವವರ ಪರಿಚಯ ಇದೆ. ನಾನು ಜೇನುಕುರುಬರ ಸಂಘದ ಸದಸ್ಯನಾಗಿದ್ದೆ. ನಮ್ಮ ಊರಿನಿಂದ ಚಟ್ಟಳ್ಳಿ



ಸುಮಾರು 7 ಕಿಮಿ ದೂರ ಇದೆ. ಚಟ್ಟಳ್ಳಿ ಮೈಸೂರು ಜಿಲ್ಲೆಗೆ ಬರುತ್ತದೆ. ನನಗೆ ಆಸ್ಪತ್ರೆಯ ಸಿಬ್ಬಂದಿಯವರು ದಿಃ 03.02.2020 ರಂದು ಫೋನ್ ಮಾಡಿದ್ದರು. ನಾನು ಹನಗೋಡು ಆಸ್ಪತ್ರೆಗೆ ಹೋಗಿ ಸಂಜೆ ಸುಮಾರು 5.15- 5.30 ರ ಒಳಗಡೆ ಚಾಸಾ 1 ರವರಿಗೆ ಫೋನ್ ಮಾಡಿದ್ದೆ. ವೈದ್ಯರು ಚಿಕಿತ್ಸೆ ಕೊಡುತ್ತಿದ್ದಾಗ ಲಕ್ಷ್ಮಿ ನನ್ನ ಬಳಿ ಆರೋಪಿ ಆಕೆಗೆ ನೀನು ಜೇನುಕುರುಬರ ಹುಡುಗಿ, ನಿನ್ನನ್ನು ನಾನು ಮದುವೆಯಾಗುವುದಿಲ್ಲ, ಬೇರೆಯವರನ್ನು ಮದುವೆಯಾಗುತ್ತೇನೆ

ಎಂದು ಹೇಳಿ ಆಕೆಗೆ ಬಲವಂತವಾಗಿ ವಿಷ ಕುಡಿಸಿದ ಬಗ್ಗೆ ಹೇಳಿದ್ದಳು. ವೈದ್ಯರು ಲಕ್ಷ್ಮಿಗೆ ಡ್ರಿಪ್ಸ್ ಹಾಕುತ್ತಿದ್ದರು. ಲಕ್ಷ್ಮಿ ಆ ದಿನ ಆರೋಪಿ ಆಕೆಗೆ ನೀನು ಜೇನುಕುರುಬರ ಹುಡುಗಿ, ನಿನ್ನನ್ನು ನಾನು ಮದುವೆಯಾಗುವುದಿಲ್ಲ, ಬೇರೆಯವರನ್ನು ಮದುವೆಯಾಗುತ್ತೇನೆ ಎಂದು ಹೇಳಿ ಆಕೆಗೆ ಬಲವಂತವಾಗಿ ವಿಷ ಕುಡಿಸಿದ ಬಗ್ಗೆ ನನ್ನ ಬಳಿ ಒಂದು ಬಾರಿ ಮಾತ್ರ ಹೇಳಿರುತ್ತಾಳೆ. ದಿಃ 03.02.2020 ರಂದು ಸಂಜೆ 5 ಗಂಟೆಯ ಸುಮಾರಿಗೆ ನಾನು ಹನಗೋಡು ಆಸ್ಪತ್ರೆಗೆ ಹೋದಾಗ ಲಕ್ಷ್ಮಿ ನನಗೆ ಮೇಲೆ ಹೇಳಿದ ವಿಷಯ ಹೇಳಿರುತ್ತಾಳೆ. ಲಕ್ಷ್ಮಿ ಚಾಸಾ 1 ರವರ ಮೂರನೇ ಮಗಳು. ನಾನು ಚಾಸಾ 1 ರವರನ್ನು ಯಾಕೆ ತಡವಾಗಿ ಬಂದಿದ್ದಾರೆ ಎಂದು ವಿಚಾರಿಸಿದಾಗ ಚಾಸಾ 1 ರವರು ಆತನ ಸಾಹುಕಾರರು ತುಂಬಾ ಕೆಲಸ ಇದೆ ಅದನ್ನು ಮುಗಿಸಿಯೇ ಹೋಗಬೇಕು ಎಂದು ಹೇಳಿದ ಕಾರಣ ತಡವಾಯಿತು ಎಂದು ಹೇಳಿದ್ದರು. ಚಾಸಾ 1 ಹಾಗೂ 2 ರವರು ಹನಗೋಡು ಆಸ್ಪತ್ರೆಗೆ ಬಂದು ಲಕ್ಷ್ಮಿಯನ್ನು ಮೈಸೂರಿನ ಕೆ ಆರ್



ಆಸ್ಪತ್ರೆಗೆ ಕರೆದುಕೊಂಡು ಹೋಗುವವರೆಗೂ ನಾನು, ಚಾಸಾ 1 ಮತ್ತು 2 ರವರು ಲಕ್ಷ್ಮಿಯ ಜೊತೆಗೆ ಇದ್ದೆವು. ದಿಃ 05.02.2020 ರಂದು ಲಕ್ಷ್ಮಿಗೆ ಪ್ರಜ್ಞೆ ತಪ್ಪಿದ್ದ ಕಾರಣ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿಯಲ್ಲ. ದಿಃ 05.02.2020 ರಂದು ಚಾಸಾ 1 ಮತ್ತು 2 ರವರು ಹನಗೋಡು ಆಸ್ಪತ್ರೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂದು ಹನಗೋಡು ಸರ್ಕಾರಿ ಆಸ್ಪತ್ರೆಗೆ ಹನಗೋಡು ಪೊಲೀಸರು ಬಂದಿದ್ದರು ಎಂದರೆ ಸರಿ. ಲಕ್ಷ್ಮಿಗೆ ಏನಾಯಿತು ಎಂದು ಅವರು ವಿಚಾರಣೆ ಮಾಡಿದ್ದರು. ನನಗೆ ಮೊಬೈಲ್ ಫೋನ್ ಇದೆ, ಅದರ ನಂಬರ್ 9535424883. ದಿಃ 03.02.2020 ರಂದು ಮಧ್ಯಾಹ್ನ 2.09 ಗಂಟೆಗೆ ನಾನು ನನ್ನ ಮೊಬೈಲ್ ನಿಂದ ಆರೋಪಿಯ ಮೊಬೈಲ್ ಸಂಖ್ಯೆ 8971919452 ನೇದ್ದಕ್ಕೆ ಕರೆ ಮಾಡಿದ್ದೆ ಎಂದರೆ ಸರಿಯಲ್ಲ. ದಿಃ 03.02.2020 ರಂದು ಮಧ್ಯಾಹ್ನ 2.09 ಗಂಟೆಗೆ ಆರೋಪಿಯ ಮೊಬೈಲ್‌ಗೆ ಫೋನ್ ಮಾಡಿ ಲಕ್ಷ್ಮಿ ವಿಷ ಕುಡಿದಿದ್ದಾಳೆ, ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ, ನೀನು ಸ್ವಲ್ಪ ಹಣ ಕೊಡಬೇಕು ಎಂದು ಕೇಳಿದ್ದೆ ಎಂದರೆ ಸರಿಯಲ್ಲ. ಹನಗೋಡು ಆಸ್ಪತ್ರೆಯಿಂದ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಲಕ್ಷ್ಮಿಯನ್ನು ಕರೆದುಕೊಂಡು ಹೋಗುವಾಗ ಹನಗೋಡು ಪೊ. ಠಾಣೆಯ ಪೊಲೀಸರು ನಮ್ಮೊಂದಿಗೆ ಬಂದಿರಲಿಲ್ಲ. ಹನಗೋಡು ಆಸ್ಪತ್ರೆಯಿಂದ

ಮೈಸೂರಿನ ಕೆ ಆರ್ ಆಸ್ಪತ್ರೆಗೆ ಲಕ್ಷ್ಮಿಯನ್ನು ಕರೆದುಕೊಂಡು ಹೋಗುವಾಗ ಹನಗೋಡು ಆಸ್ಪತ್ರೆಯ ವೈದ್ಯರು ದಾಖಲೆಗಳನ್ನು ಕೊಟ್ಟಿದ್ದರು. ಹನಗೋಡು

.6.

ಆಸ್ಪತ್ರೆಯಲ್ಲಿ ಲಕ್ಷ್ಮಿಯನ್ನು ದಾಖಲು ಮಾಡಿರಲಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ಎಲ್ಲಿ ಯಾವ ಕಾರಣಕ್ಕಾಗಿ ವಿಷ ಸೇವಿಸಿದ್ದಳು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ಎಲ್ಲೋ ವಿಷ ಸೇವಿಸಿ ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಆರೋಪಿಯಿಂದ ಹಣ ವಸೂಲಿ ಮಾಡುವ ಸಲುವಾಗಿ ಆತನ ವಿರುದ್ಧ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಲಕ್ಷ್ಮಿ ಆರೋಪಿಯನ್ನು ಪ್ರೀತಿಸುತ್ತಿದ್ದೇನೆ ಎಂದು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಲಕ್ಷ್ಮಿಗೂ ಆತ ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ಬಗ್ಗೆ ಜಗಳ ಆಯಿತು ಎಂದು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಅಯ್ಯನಕೆರೆಯಿಂದ ಬಾಳೆಲೆ ಗ್ರಾಮ ಸುಮಾರು 35 – 40 ಕಿಮಿ ದೂರ ಇರಬಹುದು. ಅಯ್ಯನಕೆರೆಯಿಂದ ಬಾಳೆಲೆ ಗ್ರಾಮಕ್ಕೆ ಪಿರಿಯಾಪಟ್ಟಣದ ಮುಖಾಂತರ, ತಿತಿಮತಿಯ ಮುಖಾಂತರ ಮತ್ತು ನಾಗರಹೊಳೆ ಅಭಯಾರಣ್ಯದ ಮುಖಾಂತರ ಹೋಗಬಹುದು. ಅಯ್ಯನಕೆರೆಯಿಂದ ಬಾಳೆಲೆಗೆ ಹೋಗಿ ಬರಲು ಸುಮಾರು ಒಂದುವರೆ ಗಂಟೆ ಸಾಕು. ಅಯ್ಯನಕೆರೆಯಿಂದ ಬಾಳೆಲೆ ಗ್ರಾಮಕ್ಕೆ ಹೋಗಿ ವಾಪಸ್ಸು ಬರಲು 4 ಗಂಟೆ ಅವಧಿ ಬೇಕಾಗುತ್ತದೆ ಎಂದರೆ ಸರಿಯಲ್ಲ. ಲಕ್ಷ್ಮಿ ಆರೋಪಿ ಆಕೆಯ ಕೈ ಕಾಲು ಬಿಗಿಯಾಗಿ ಹಿಡಿದು ವಿಷ ಕುಡಿಸಿದ ಎಂದು ನನ್ನ ಬಳಿ ಹೇಳಿದ್ದಳು ಎಂದು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಲಕ್ಷ್ಮಿಯ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

.7.

ಲಕ್ಷ್ಮಿ ಯಾವುದೋ ಕಾರಣಕ್ಕೆ ವಿಷ ಸೇವಿಸಿ ಮೃತಪಟ್ಟಿದ್ದು ಆರೋಪಿಯಿಂದ ಹಣ ವಸೂಲಿ ಮಾಡಲು ಜೇನು ಕುರುಬರ ಸಂಘದ ಮುಖಾಂತರ ಪ್ರಯತ್ನಪಟ್ಟಿದ್ದು ನಮ್ಮ ಪ್ರಯತ್ನ ಸಫಲ ಆಗದೇ ಇದ್ದ ಕಾರಣ ಆರೋಪಿಯ ವಿರುದ್ಧ ಒಂದು ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ದಿಃ 03.02.2020 ರಂದು ನಾನು ಚಾಸಾ 1 ರವರಿಗೆ ಫೋನ್ ಮಾಡಿಲ್ಲ

ಎಂದರೆ ಸರಿಯಲ್ಲ. ಲಕ್ಷ್ಮಿಗೆ ಆರೋಪಿ ಪ್ರದೀಪ ವಿಷ ಕುಡಿಸಿದ್ದಾನೆ ಎಂದು ಹೇಳಿದ್ದಾಳೆ ಎಂದು ಚಾಸಾ 1 ರವರಿಗೆ ಫೋನ್ ಮಾಡಿ ಹೇಳಿದ್ದೆ ಎಂದು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೋದಾಗ ಆಸ್ಪತ್ರೆಯಲ್ಲಿ ಬೇರೆ ರೋಗಿಗಳೂ ಕೂಡ ಇದ್ದರು. ನಮ್ಮ ಕುಟುಂಬಸ್ಥರು ಬೇರೆ ಯಾರೂ ಇರಲಿಲ್ಲ. ಆರೋಪಿಯು ಲಕ್ಷ್ಮಿಗೆ ನೀನು ಜೇನುಕುರುಬರ ಜಾತಿಯವಳು ನಿನ್ನನ್ನು ಮದುವೆಯಾಗುವುದಿಲ್ಲ, ಬೇರೆಯವರನ್ನು ಮದುವೆಯಾಗುತ್ತೇನೆ, ನೀನು ಭೂಮಿಯಲ್ಲಿ ಇರಬಾರದು ಎಂದು ಹೇಳಿದ್ದಾನೆ ಎಂದು ಲಕ್ಷ್ಮಿ ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯೇ ಲಕ್ಷ್ಮಿಯನ್ನು ಆಸ್ಪತ್ರೆಗೆ ತಂದು ಸೇರಿಸಿದ್ದ ಎಂದು ಲಕ್ಷ್ಮಿ ನನಗೆ ಹೇಳಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

.8.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)